ಇ) ಹಾಗಿದ್ದಲ್ಲಿ ಈ ಯೋಜನೆಗೆ ಎಷ್ಟು ಹಣ ಒದಗಿಸಲಾಗುವುದು ಮತ್ತು ಯೋಜನೆಯನ್ನು ಯಾವಾಗ ಕಾರ್ಯರೂಪಕ್ಕೆ ತರಲಾಗುವುದು ?

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು

ಆ) ಭಟ್ಕಳ ನೀರು ಸರಬರಾಜು ಮೂರನೇ ಹಂತದ ಯೋಜನೆಯನ್ನು ರೂಪಿಸಲಾಗಿದ್ದು ಅದರ ಅಂದಾಜು ಪಟ್ಟಿ ಮತ್ತು ನಕ್ಷೆಯನ್ನು ತಯಾರಿಸಲಾಗುತ್ತಿದೆ.

ಇ) ಅಂದಾಜು ಪಟ್ಟಿ ಸರ್ಕಾರದ ಕೈಸೇರಿದ ನಂತರ ಹಣದ ಲಭ್ಯತೆಯನ್ನಾಧರಿಸಿ ಹಣವನ್ನು ಒದಗಿಸಲು ಯೋಜಿಸಲಾಗುವುದು, ಯೋಜನೆ ಪ್ರಾರಂಭ ಮಾಡಿದ ನಂತರ 3-4 ವರ್ಷಗಳಾಗುವುದು.

ಬೀಳಗಿ ಮುಳುಗಡೆ ಪ್ರದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸುವುದು

55 - ಶ್ರೀ ಜಿ.ಟಿ. ಪಾಟೀಲ್ (ಬೀಳಗಿ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಿಜಾಪುರ ಜಿಲ್ಲೆಯ ಬೀಳಗಿ ಮತಕ್ಷೇತ್ರದ ಒಟ್ಟು 100 ಹಳ್ಳಿಗಳ ಪೈಕಿ ಅಲಮಟ್ಟಿ ಯೋಜನೆಯಲ್ಲಿ 65 ಹಳ್ಳಿಗಳು ಮುಳುಗಡೆಯಾಗುತ್ತಿರುವ ವಿಷಯ ಕೈಗಾರಿಕಾ ಇಲಾಖೆಯ ಗಮನಕ್ಕೆ ಬಂದಿದೆಯೇ ?

ಆ) ಬಂದಿದ್ದರೆ ಈ ಜನರ ಉದ್ಯೋಗದ ಸಲುವಾಗಿ ಯಾವುದಾದರೂ ಬೃಹತ್ ಹಾಗೂ ಮಧ್ಯಮ ಕೈಗಾರಿಕೆಗಳನ್ನು ಪ್ರಾರಂಭಿಸಲು ಸರ್ಕಾರ ಯೋಚಿಸಿದೆಯೆ ?

ಇ) ಯೋಚಿಸಿದ್ದಲ್ಲಿ ಅವು ಯಾವುವು ?

ಈ) ಒಂದು ವೇಳೆ ಯಾವುದೇ ತೀರ್ಮಾನ ತೆಗೆದುಕೊಂಡಿದ್ದಲ್ಲಿ ಈ ಜನರ ಸಹಾಯಕ್ಕೆ ಸರಕಾರ ಗಮನಹರಿಸಿ ಯಾವುದಾದರೂ ಮೀಸಲಾಗಿ ಸ್ಥಾಪಿಸಲು ಕ್ರಮ ಕೈಗೊಳ್ಳಲಾಗುವುದೆ ?

ಉ) ಮುಳುಗಡೆಯಾಗತಕ್ಕಂಥ ಜನರಿಗೆ ಉದ್ಯೋಗದಲ್ಲಿ ಕೈಗಾರಿಕಾ ಇಲಾಖೆಯ ವತಿಯಿಂದ ಮೀಸಲಾಗಿ ಕೊಡಲು ಕ್ರಮ ಕೈಗೊಳ್ಳಲಾಗುವುದೆ ?

ಊ) ಇದಕ್ಕೆ ಸಂಬಂಧಿಸಿದಂತೆ ಮುಳುಗಡೆ ಭಾಗದ ಶಾಸಕರ ಸಭೆ ಕರೆದು ಚರ್ಚಿಸಲು ಸರ್ಕಾರದವರು ಯೋಚಿಸಿರುವರೆ, ಹಾಗಿದ್ದಲ್ಲಿ ಯಾವಾಗ ಸಭೆ ಕರೆಯಲಾಗುವುದು ?

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ಬಂದಿದೆ.

ಆ) ಇಲ್ಲ.

ಇ) ಅನ್ವಯಿಸುವುದಿಲ್ಲ

ಈ) ಇದನ್ನು ಪರಿಶೀಲಿಸಲಾಗುವುದು. ಖಾಸಗಿಯವರು ಕೈಗಾರಿಕೆ ಸ್ಥಾಪಿಸಲು ಮುಂದೆ ಬಂದಲ್ಲಿ ರಾಜ್ಯ ಸರ್ಕಾರದ ಇತ್ತೀಚಿನ ಕೈಗಾರಿಕಾ ನೀತಿಯಂತೆ ಪ್ರೋತ್ಸಾಹ ಹಾಗೂ ಸಹಾಯ ಧನ ಒದಗಿಸಲಾಗುವುದು.

ಉ) ಸರ್ಕಾರದ ನೀತಿಯ ಪ್ರಕಾರ ಸ್ಥಾಪಿಸಲ್ಪಡುತ್ತಿರುವ ಕಾರ್ಖಾನೆಗಳಲ್ಲಿ ಶೇಕಡ 80 ರಿಂದ 100 ರಷ್ಟು ಉದ್ಯೋಗಗಳನ್ನು ಕನ್ನಡಿಗರಿಗೆ ಒದಗಿಸಬೇಕಾಗುತ್ತದೆ.

ಊ) ಇದನ್ನು ಪರಿಶೀಲಿಸಲಾಗುವುದು.

ಹೊಸ ಕೈಗಾರಿಕಾ ನೀತಿ ಕುರಿತು

56 - ಶ್ರೀ ಡಿ.ಆರ್. ಪಾಟೀಲ್ (ಗದಗ್) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯ ಸರ್ಕಾರದವರು ಹೊಸ ಕೈಗಾರಿಕೆ ನೀತಿಯನ್ನು ಎಂದು ಪ್ರಕಟಿಸುವರು?*

ಆ) *ಈ ಕೈಗಾರಿಕಾ ನೀತಿಯಲ್ಲಿ ರೋಗ-ಗ್ರಸ್ಥ ಉದ್ಯಮಗಳನ್ನು ಪುನರುಜ್ಜೀವನಗೊಳಿಸುವುದು ಆದ್ಯತೆ ನೀಡಲಾಗುವುದೇ*

ಇ) *ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿ ಪ್ರಾರಂಭಿಸಲಾಗುವ ಕೈಗಾರಿಕೆಗಳಿಗೆ ವಿಶೇಷ ರಿಯಾಯಿತಿ ಹಾಗೂ ನೆರವು ನೀಡಲಾಗುವುದೇ*

ಶ್ರೀ ಆರ್.ವಿ. ವೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ಇಷ್ಟರಲ್ಲಿಯೇ ಪ್ರಕಟಿಸಲಾಗುವುದು

ಆ) ಈ ಬಗ್ಗೆ ಹೊಸ ಕೈಗಾರಿಕಾ ನೀತಿಯನ್ನು ಪ್ರಕಟಿಸುವಾಗ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು.

ನಿಪ್ಪಾಣಿ ಕುಡಿಯುವ ನೀರಿನ ಯೋಜನೆ

57 - ಶ್ರೀ ಪ್ರಕಾಶ್ ಬಿ. ಹುಕ್ಕೇರಿ (ಸದಲಗಾ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ನಿಪ್ಪಾಣಿ ಕುಡಿಯುವ ನೀರಿನ ಯೋಜನೆಗೆ ಮಂಜೂರಾತಿ ನೀಡಿರುವುದು ಯಾವಾಗ? ಈ ಯೋಜನೆಗೆ ಎಷ್ಟು ಹಣ ಖರ್ಚಾಗುವುದು, ಈವರೆವಿಗೂ ಎಷ್ಟು ಹಣ ಖರ್ಚಾಗಿರುವುದು?*

ಆ) *ಈ ಕುಡಿಯುವ ನೀರಿನ ಯೋಜನೆ ಯಾವ ಹಂತದಲ್ಲಿ ಇದೆ?*

ಇ) *ಈ ಯೋಜನೆಗೆ ಯಾವಾಗ ಪೂರ್ಣಗೊಳಿಸಲಾಗುವುದು?*

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :